**ವ್ಯಾಖ್ಯಾನ**

# ಬಾರೋ ಬ್ರಹ್ಮಾದಿ ವಂದ್ಯ

1. **Ref.**: Haridasa Taranga Part-2, Published by M/s. Vyaasaanandadasa Pratishtaana, Bengaluru-98, First Edition 2014, page No. 100.
2. **Author:** Pandith Parashuram Betageri, Bengaluru.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಹರಿದಾಸ ಭಜನಾ ಸಂಪ್ರದಾಯ ಪದ್ಧತಿಯಲ್ಲಿ ಪರಮಾತ್ಮನನ್ನು ಕರೆಯುವ ಪದಗಳನ್ನು ಹೇಳಲಾಗುತ್ತದೆ. ಶ್ರೀಕೃಷ್ಣನನ್ನು ಕರೆಯುವ ದಾಸರ ಪದಗಳು ಹೇರಳವಾಗಿವೆ. ಪ್ರಸ್ತುತ ಶ್ರೀಪುರಂದರದಾಸರು ಮಗುವಾದ ಶ್ರೀಕೃಷ್ಣನನ್ನು ಕರೆಯುವ ಪರಿಯನ್ನು ನೋಡೋಣ.

**ಬಾರೋ ಬ್ರಹ್ಮಾದಿ ವಂದ್ಯ ವಸುದೇವ ಸುತನ ॥ ಪ ॥**

ವಸುದೇವ ದೇವಕಿಯರ ಕಂದನೂ ಬ್ರಹ್ಮಾದಿ ದೇವತೆಗಳಿಂದ ವಂದ್ಯನೂ ಆದ ಶ್ರೀಕೃಷ್ಣನನ್ನು ದಾಸರು ಕರೆಯುತ್ತಿದ್ದಾರೆ.

**ಗೊಲ್ಲರ ಮನೆಗೆ ಹೋಗಲಿ ಬೇಡ । ಗೋವಿಂದ ಕೇಳೊ ನಿನಗೆ ॥**
**ಹಾಲು ಮೊಸರು ಬೆಣ್ಣೆಯ ಕೊಡುವೆ । ಜಾಲ ಮಾಡದೆ ಬೇಗನೆ ಬಾರೊ ॥ 1 ॥**

ನಂದಗೋಪನ ಮನೆಯ ಸುತ್ತಲೆಲ್ಲಾ ಅನೇಕ ಗೊಲ್ಲರ ಮನೆಗಳು ಇದ್ದವು. ಪುಟ್ಟ ಶ್ರೀಕೃಷ್ಣ ಆ ಮನೆಗಳಿಗೆ ಹೋಗುತ್ತಿದ್ದನು. ಅವರ ಮನೆಗಳಲ್ಲಿನ ಹಾಲು ಮೊಸರು ಬೆಣ್ಣೆಗಳನ್ನು ಕದ್ದು ತಿನ್ನುತ್ತಿದ್ದನು. ಪರಮಾತ್ಮನು ತಮ್ಮ ಮನೆಯಲ್ಲಿಯೇ ನೆಲೆಸಿರಬೇಕು, ತಮ್ಮನ್ನು ಅಗಲಿ ಸ್ವಲ್ಪವೂ ಇರಬಾರದು ಎನ್ನುವ ಬಯಕೆ ಭಕ್ತನಿಗೆ ಇರುವುದು ಸಹಜ. ನಮ್ಮ ಮನೆಯನ್ನು ಬಿಟ್ಟು ಗೊಲ್ಲರ ಮನೆಗೆ ಹೋಗುವುದು ಆತನಿಗೆ ಅಲ್ಲಿ ಯಥೇಚ್ಚವಾಗಿ ಹಾಲು ಮೊಸರು ಬೆಣ್ಣೆಯು ಸಿಗುವುದರಿಂದಲೇ ಎಂದು ಭಕ್ತನ ಅಭಿಪ್ರಾಯವು. ಪರಮಾತ್ಮನಿಗೆ ಮೆಚ್ಚುಗೆಯಾದ ಆ ಎಲ್ಲವುಗಳನ್ನೂ ತಾನೇ ಕೊಡಲು ಭಕ್ತನು ಈಗ ಸಿದ್ಧನಾಗಿದ್ದಾನೆ. ಪರಮಾತ್ಮನಿಗೆ ಬೇಕಾದುದನ್ನು ನೀಡಿದರೆ ಅವನು ತನ್ನಲ್ಲಿಯೇ ಇರುತಾನೆ ಎಂಬ ನಂಬಿಕೆಯು ಭಕನಲ್ಲಿದೆ. ಮಗು ಶ್ರೀಕೃಷ್ಣನು ಜಾಲ (ಕಪಟ) ಮಾಡದೇ ತನ್ನಲ್ಲಿಯೇ ಬರಬೇಕು ಎಂದು ಪ್ರಾರ್ಥಿಸುತಾನೆ ಕೂಡ. ಪರಮಾತ್ಮನು ಸದಾ ತನ್ನ ಹೃದಯದಲ್ಲಿ ವಾಸ ಮಾಡಬೇಕೆಂಬುದು ಭಕ್ತನ ಆಶಯವು.

**ಬೀದಿಗೆ ನೀ ಕುಣಿದಾಡುತ ಬಾರೋ ।**
**ದೀನ ರಕ್ಷಕನೆ ಚಂದದಿ ॥**
**ಜಗದೀಶ ನೀ ಕುಣಿದಾಡುತ ಬಾರೋ ।**
**ಚನ್ನಕೇಶವನೇ ಬಾರೋ ॥ 2 ॥**

ನಮ್ಮ ಮನೆಯಿರುವ ಬೀದಿಗೆ ನೀನು ಕುಣಿದಾಡುತ್ತಾ ಬರಬೇಕು. ದೀನರ ರಕ್ಷಕನಾದ ನೀನು ಚಂದದಿಂದ ಬರಬೇಕು. ಜಗದೀಶನೇ ನೀನು ಕುಣಿಕುಣಿದಾಡುತ್ತ ಬೀದಿಯಿಂದ ನಮ್ಮ ಮನೆಗೆ ಬರಬೇಕು.

ಮನೆ ಎಂದರೆ ಹೃದಯ ಗುಹೆ, ಬೀದಿ ಎಂದರೆ ನಾಡಿಗಳು. ಹೃದಯ ಗುಹೆಯಲ್ಲಿ ಪರಮಾತ್ಮನ ವಿಶೇಷ ಸನ್ನಿಧಾನವಿದ್ದರೆ ಆತನ ಸನ್ನಿಧಾನವು ದೇಹದಲ್ಲಿರುವ 72000 ನಾಡಿಗಳಲ್ಲಿಯೂ ಇರುತ್ತವೆ ಎಂಬ ಅಭಿಪ್ರಾಯವು.

**ದೊಡ್ಡ ದೊಡ್ಡ ಮುತ್ತಿನ ಹಾರ ।**

**ಹಾಕಿ ನೋಡುವೆನೋ ನಾನು ॥**

**ದೊಡ್ಡ ಪುರದ ದ್ವಾರಕಿವಾಸ ।**

**ಪುರಂದರವಿಠ್ಠಲ ಬೇಗ ಬಾರೋ ॥ 3 ॥**

ನನ್ನ ಮನೆಗೆ ಬಂದಿರುವ ನಿನಗೆ ಕೊರಳಲ್ಲಿ ದೊಡ್ಡ ದೊಡ್ಡ ಮುತ್ತಿನ ಹಾರಗಳನ್ನು ಹಾಕಿ ನಿನ್ನನ್ನೂ ನೋಡಿ ಸಂತೋಷಪಡುತ್ತೇನೆ. ದೊಡ್ಡಪುರದ (ವೈಕುಂಠದ ದೊರೆ) ಮತ್ತು ದ್ವಾರಕಾ ಪುರದಲ್ಲಿ ವಾಸವಾಗಿರುವ ಪರಮಾತ್ಮನೇ ನೀನು ಬೇಗನೆ ನಮ್ಮ ಮನೆಗೆ ಬರಬೇಕು.

## ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು:** ಪಂ॥ **ಶ್ರೀ ಪರಶುರಾಂ ಬೆಟಗೇರಿ**